ಲಭ್ಯವಾಗದು. ಕುಲೀನರು ಕತ್ತೆಯನ್ನು ಕೀಳ್ಗಳೆವ ಸಮಾಜಗಳಲ್ಲೇ ಜನಸಾಮಾನ್ಯರು, ಅದರ ಜಾಣ್ಮೆ ಸಾರುವ ಕತೆಗಳನ್ನು ಕಟ್ಟಿದರು. ನಮ್ಮ ಶಾಲಾ ಪುಸ್ತಕಗಳಲ್ಲಿದ್ದ 'ನೀನನಗಿದ್ದರೆ ನಾನಿನಗೆ' ಪದ್ಯವೂ ಇದಕ್ಕೆ ಹೊರತಲ್ಲ. ಅದರಲ್ಲಿ ಸಂತೆಗೆ ಹೋಗುವ ಭೀಮಣ್ಣ, ಹತ್ತುಮಣ ಹಿಂಡಿಯನ್ನು ಕೊಂಡು ಕತ್ತೆಗೆ ಹೇರುತ್ತಾನೆ. ಹಿಂಡಿಯನ್ನು ಇಬ್ಬರೂ ಉಣ್ಣುವುದರಿಂದ, ಕತ್ತೆ, ಹೇರನ್ನು ಹಂಚಿಕೊಳ್ಳಲು ಕುದುರೆಯಲ್ಲಿ ವಿನಂತಿಸುತ್ತದೆ. ಕುದುರೆ ನಿರಾಕರಿಸಲು, ಅದು ನಡುದಾರಿಯಲ್ಲಿ ಸೊಂಟಮುರಿದಂತೆ ಬಿದ್ದು ನಟಿಸುತ್ತದೆ. ಮಾಲೀಕ ಹೇರನ್ನು ಕುದುರೆಗೆ ವರ್ಗಾಯಿಸುತ್ತಾನೆ. ಕತ್ತೆ ಕುಣಿದಾಡಿಕೊಂಡು ಬರುತ್ತದೆ. ಶ್ರಮ ವಿಭಜನೆ ಮತ್ತು ಹಂಚಿಕೊಂಡು ಬದುಕುವ ತತ್ತ್ವವನ್ನು ಲೋಕಕ್ಕೆ ಕಲಿಸಿದ ಮೊದಲ ಸಮಾನತಾವಾದಿ ಕತ್ತೆಯೇ ಇರಬೇಕು.

ಲೋಕದಲ್ಲಿ ಕತ್ತೆಗೆ ಸಮರ್ಪಿತವಾದ ಅತ್ಯುನ್ನತ ಗೌರವವನ್ನು, ಏಸು ಹುಟ್ಟಿ ಬೆಳೆದ ಪ್ಯಾಲೆಸ್ತೇನ್, ಇಸ್ರೇಲು, ಈಜಿಪ್ತುಗಳಲ್ಲಿ ಕಣ್ಣಾರೆ ಕಂಡೆವು. ಅಲ್ಲಿನ ಚರ್ಚುಗಳಲ್ಲಿ ಅದರ ಸವಾರಿಯ ಭಿತ್ತಿಚಿತ್ರಗಳಿದ್ದವು. ಅವು ಮೇರಿ–ಜೋಸೆಫರು ಮಾಡಿದ ಎರಡು ಪಯಣಗಳಿಗೆ ಸಂಬಂಧಿಸಿದವು. ಮೊದಲನೆಯದು–ಜೋಸೆಫನು ನಜರೇತಿನಿಂದ ತುಂಬು ಗರ್ಭಿಣಿ ಮೇರಿಯನ್ನು ಬೆತ್ಲೆಹೆಮ್ಮಿಗೆ ಕರೆತಂದಿದ್ದು. ಎರಡನೆಯದು–ಗಂಡುಗೂಸನ್ನು ಕೊಲ್ಲುವ ಚಕ್ರವರ್ತಿಯ ಕಂಸಾಜ್ಞೆಯಿಂದ ತಪ್ಪಿಸಿಕೊಳ್ಳಲು, ಬಾಲಏಸುವನ್ನೂ ಮೇರಿಯನ್ನೂ ಸವಾರಿಸಿಕೊಂಡು ಬೆತ್ಲೆಹೆಮ್ಮಿನಿಂದ ಈಜಿಪ್ಟಿಗೆ ಹೋಗಿದ್ದು. ಚಾರಿತ್ರಿಕ ಮಹತ್ವದ ಈ ಪಯಣಗಳು ಜಗತ್ತಿನ ಕಲಾವಿದರನ್ನು ಸೆಳೆದವು. ಇವನ್ನವರು ಶಿಲ್ಪದಲ್ಲಿ ಮೂಡಿಸಿದರು; ಚರ್ಚಿನ ಜಾಲಂದ್ರ, ಛಾವಣಿ, ಗೋಡೆಗಳ ಮೇಲೆ ವರ್ಣಚಿತ್ರಗಳಾಗಿ ಬಿಡಿಸಿದರು. ದಂಪತಿಯ ಆತಂಕವನ್ನೂ ಪುಟ್ಟಏಸುವಿನ ಮುಗ್ಧತೆಯನ್ನೂ ಕಾಣಿಸುವಷ್ಟೇ ಶ್ರದ್ಧೆಯಿಂದ, ಕತ್ತೆಯ

